# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ - 53

ಸ್ವಾಮಿ ನಿತ್ಯಸ್ಥಾನಂದ



ಅಧ್ಯಾಯ ೯

## ಬ್ರಾಹ್ಮಭಕ್ತರಿಗೆ ಉಪದೇಶ

### ಕಾಮ-ಕಾಂಚನ ತ್ಯಾಗ

‘‘ಪರಮಹಂಸರು ಭವನಾಥ್, ರಾಖಾಲ್, ಮಾಸ್ಟರ್ ಇವರೇ ಮೊದಲಾದವರೊಡನೆ ಕಲ್ಕತ್ತದಲ್ಲಿರುವ ಬಲರಾಮನ ಮನೆಗೆ ಬಂದಿದ್ದಾರೆ. ಬಲರಾಮ ಪರಮಹಂಸರ ಇಚ್ಛೆಗನುಸಾರ ಕೆಲವು ಮಂದಿ ಯುವಕರನ್ನು ಊಟಕ್ಕೆ ಕರೆದಿದ್ದಾನೆ. ಪರಮಹಂಸರು ಅನೇಕ ವೇಳೆ ಆತನಿಗೆ ಹೇಳಿದ್ದರು: ‘ಆಗಾಗ ಹುಡುಗರನ್ನು ಮನೆಗೆ ಕರೆದುಕೊಂಡು ಹೋಗಿ ಅನ್ನ ಹಾಕು. ಅದರಿಂದ ಅನೇಕ ಸಾಧುಗಳಿಗೆ ಅನ್ನ ಹಾಕಿದ ಪುಣ್ಯ ಬರುತ್ತದೆ’ ಎಂಬುದಾಗಿ. ಪರಮಹಂಸರು ತಮ್ಮ ಯುವಕ ಶಿಷ್ಯರನ್ನು ಕಾಮಕಾಂಚನ ಸ್ಪರ್ಶವಿಹೀನರಾದ ಭಗವಂತನ ಅಂಶಗಳೇ ಎಂಬುದಾಗಿ ಭಾವಿಸುತ್ತಿದ್ದರು.’’ *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು.೧೬೩)*

‘ಕಾಮ-ಕಾಂಚನ ತ್ಯಾಗವೇ ತ್ಯಾಗ’ ಇದು ಶ್ರೀರಾಮಕೃಷ್ಣರ ನಿಶ್ಚಿತ ನಿಲುವು. ಇದು ಬೇರನ್ನೇ ಕಿತ್ತು ಹಾಕಿದಂತೆ. ಕಾಮ-ಕಾಂಚನಗಳೆರಡೂ ಅಹಂನ ಅಸ್ತಿತ್ವಕ್ಕೆ ಆಧಾರವಾಗಿರುವಂತಹದು. ‘ನಾನಿರಬೇಕು’ ಮತ್ತು ‘ನಾನು ಸುಖವಾಗಿರಬೇಕು’ -ಇವೆರಡು ನಮ್ಮಲ್ಲಿರುವ ಮುಖ್ಯವಾದ ತುಡಿತಗಳು. ನಾನಿರಬೇಕಾದರೆ ನನಗೆ ಸಂಪತ್ತು, ಅಧಿಕಾರ, ಸ್ಥಾನಮಾನಾದಿಗಳ ಆಶ್ರಯ ಬೇಕಾಗುತ್ತದೆ. ಇವೆಲ್ಲವನ್ನೂ ಕಾಂಚನದ ವರ್ಗಕ್ಕೆ ಸೇರಿಸಬಹುದು. ಇದನ್ನು ಆಂಗ್ಲಭಾಷೆಯಲ್ಲಿ ‘Possessive Principle’ ಎಂದು ಕರೆಯಬಹುದು. ನಾನು ಇದ್ದರೆ ಸಾಕಾಗುವುದಿಲ್ಲ, ನಾನು ಸುಖವಾಗಿಯೂ ಇರಬೇಕು. ಈ ಸುಖದ ಬಯಕೆಯನ್ನೇ ಶ್ರೀರಾಮಕೃಷ್ಣರು ‘ಕಾಮ’ ಎಂದು ಕರೆಯುವುದು. ಏಕೆಂದರೆ ಈ ಲೈಂಗಿಕ ಸುಖಾಸಕ್ತಿಯೇ ಎಲ್ಲ ಸುಖಾಸಕ್ತಿಯ ಮೂಲ. ಇದನ್ನೇ ಆಂಗ್ಲಭಾಷೆಯಲ್ಲಿ ‘Pleasure Principal’ ಎಂದು ಕರೆಯುವುದು. ಈ ನಾಲ್ಕು ‘P’ ಗಳೇ ನಮ್ಮನ್ನು ಆಳುತ್ತಿರುವುದು. ಈ ‘P’ ಗಳ ಪ್ರಭುತ್ವದಿಂದ ಪಾರಾಗಲು ಪರಮಾತ್ಮನ ಪಾದಾರವಿಂದದಲ್ಲಿ ಪೊಡಮಡಬೇಕು.

ಬಾಹ್ಯ ವಸ್ತುಗಳನ್ನು ತ್ಯಾಗಮಾಡುವಂತೆ ಇವುಗಳನ್ನು ಬಿಟ್ಟುಬಿಡಲು ಆಗುವುದಿಲ್ಲ. ಏಕೆಂದರೆ ಇವುಗಳಿಗೆ ಮೂರ್ತರೂಪಗಳಿಲ್ಲ. ಬಾಹ್ಯ ಸುಖಸಾಧನಗಳನ್ನು ಬಿಡಬಹುದು. ಆದರೆ ಸುಖಾಸಕ್ತಿಯನ್ನು ತ್ಯಾಗಮಾಡುವುದು ಸುಲಭವಲ್ಲ. ಸಂಪತ್ತು ಅಧಿಕಾರಾದಿಗಳನ್ನು ಬಿಡಬಹುದು. ಆದರೆ ಸ್ವಾಮ್ಯಾಸಕ್ತಿಯನ್ನು ಬಿಡುವುದು ಅಷ್ಟು ಸುಲಭವಲ್ಲ. ಕಾಗದದ ಮೇಲೆ ಬರೆದುದನ್ನು ಅಳಿಸಿಹಾಕಲಾಗುವುದಿಲ್ಲ. ಇರೇಸರ್ ಮೂಲಕ ಉಜ್ಜಿ ಉಜ್ಜಿ ತೆಗೆಯಬೇಕಾಗುತ್ತದೆ. ಹಾಗೆಯೇ ಆಂತರಿಕ ಆಸಕ್ತಿಯನ್ನು ಹೋಗಲಾಡಿಸಲು ತುಂಬ ಸಾಧನೆ ಮಾಡಬೇಕಾಗುತ್ತದೆ. ಮನಸ್ಸು ಸುಖವನ್ನು ಬಯಸುತ್ತದೆ, ಇದು ಸ್ವಾಭಾವಿಕ. ಅಷ್ಟೇನೂ ಹಾನಿಕರವಲ್ಲದ ಸಣ್ಣಪುಟ್ಟ ಆಸೆಗಳನ್ನು ತ್ಯಾಗ ಮಾಡಿದರೆ ಮನಸ್ಸು ಯಾವುದೋ ದೊಡ್ಡ ಆಸೆಗೆ ಬಲಿಯಾಗಬಹುದು.

ಕಾಲುವೆಯಲ್ಲಿ ನೀರು ಸೋರದಂತೆ ತಡೆದಾಗ, ನೀರಿನ ಒತ್ತಡ ಜಾಸ್ತಿಯಾಗಿ ಕಟ್ಟೆಯನ್ನೇ ಒಡೆದುಕೊಂಡು ಹೋಗಬಹುದು. ಆಗ ಗದ್ದೆಗೆ ಒಂದು ತೊಟ್ಟು ನೀರೂ ಹೋಗುವುದಿಲ್ಲ. ನೀರು ಸೋರದಂತೆಯೂ ನೋಡಿಕೊಳ್ಳಬೇಕು, ಎರಡೂ ಕಡೆಯ ಕಟ್ಟೆಯನ್ನೂ ಗಟ್ಟಿಮಾಡಬೇಕು.

### ಅಹಂನ ಹಸಿವು

ಈಗಿನ ಸಂದರ್ಭದಲ್ಲಿ ಅಹಂ ಹಸಿವು ಅಧಿಕವಾಗಿರುವಂತೆ ಕಂಡುಬರುತ್ತದೆ. ಈ ಅಹಂ ಎನ್ನುವುದು ವಿಜ್ಞಾನಮಯ ಕೋಶಕ್ಕೆ ಸಂಬಂಧಿಸಿದುದು. ನಮ್ಮ ವ್ಯಕ್ತಿಭಾವ ಅಥವಾ ಜೀವ ಭಾವ (sense of induviduality) ವಿಜ್ಞಾನಮಯ ಕೋಶದ ಲ್ಲಿಯೇ ಕೇಂದ್ರೀಕೃತವಾಗಿರುವುದು. ಈ ಪಂಚಕೋಶ ವಿಚಾರ ವನ್ನು ಜೀವವಿಕಾಸದ ದೃಷ್ಟಿಯಿಂದ ಈ ಕೆಳಗಿನಂತೆ ವಿವರಿಸ ಬಹುದು: ಕಾಡಿನಲ್ಲಿ ವಾಸಿಸುತ್ತಿದ್ದ ಆದಿಮಾನವನು ಅನ್ನಮಯ ಮತ್ತು ಪ್ರಾಣಮಯ ಕೋಶಗಳ ಹಂತದಲ್ಲಿಯೇ ವಾಸಿಸುತ್ತಿದ್ದ ಎನ್ನಬಹುದು. ಏಕೆಂದರೆ, ಆಹಾರಸಂಗ್ರಹ ಮತ್ತು ಪ್ರಾಣರಕ್ಷಣೆ ಇವಿಷ್ಟಕ್ಕೆ ಮಾತ್ರ ಅವನ ಗಮನ ಸೀಮಿತವಾಗಿತ್ತು. ಬೇರೆ ವಿಚಾರ ಗಳಿಗೆ ಗಮನ ಹರಿಸುವುದು ದುಃಸಾಧ್ಯವಾಗಿತ್ತು. ಮಾನವನು ವಿಕಾಸಹೊಂದಿದಂತೆ ಅವನ ಮನಸ್ಸೂ ವಿಕಾಸ ಹೊಂದಿತು. ಈಗ ಅವನು ಮನೋಮಯ ಕೋಶದ ಹಂತಕ್ಕೆ ಏರಿದನು. ಮನಸ್ಸು ವಿಕಾಸ ಹೊಂದಿದಂತೆಲ್ಲಾ ಜ್ಞಾನಪ್ರಭೇದಗಳು ಬೆಳೆದವು, ವಿವಿಧ ಕಲೆಗಳು ವಿಕಾಸಗೊಂಡವು. ವಿಜ್ಞಾನ-ತಾಂತ್ರಿಕತೆ ಬೆಳೆಯಿತು. ಧರ್ಮ, ಸಂಸ್ಕೃತಿ, ನಾಗರಿಕತೆ ಇವೆಲ್ಲವೂ ಗರಿಗೆದರಿದವು. ಮುಂದಿನ ವಿಕಾಸದ ಹಂತ ವಿಜ್ಞಾನಮಯಕೋಶ. ಈ ಹಂತ ದಲ್ಲಿ ಅಹಂಪ್ರಜ್ಞೆ ಇರಲಿಲ್ಲವೆಂದಲ್ಲ. ಈ ಯುಗದಲ್ಲಿ ಅಹಂನ ಹಸಿವು ಅಧಿಕ. ಆದ್ದರಿಂದಲೇ ಜನರು ಹೆಚ್ಚು ಪ್ರಚಾರ ಪ್ರಿಯರು, ಭಾವಚಿತ್ರ ಬಯಸುವವರು. ಅಧಿಕಾರ, ಹೆಸರು, ಕೀರ್ತಿ, ಸ್ಥಾನ, ಮಾನಾದಿಗಳ ಮೂಲಕ ಜನರು ತಮ್ಮ ಅಹಂನ ಹಸಿವನ್ನು ನೀಗಿಸಲು ಹಪಹಪಿಸುತ್ತಾರೆ. ಬಹಿರ್ಮುಖವಾದ ಅಹಂಪ್ರಜ್ಞೆಯನ್ನು ಅಂತರ್ಮುಖಿಗೊಳಿಸಿದರೆ, ಆಧ್ಯಾತ್ಮೀಕರಿಸಿ ದರೆ ಆಗ ಅಹಂ ಅಧ್ಯಾತ್ಮ ರಸಾನುಭವದಿಂದ ತನ್ನ ಹಸಿವನ್ನು ನೀಗಿಸಿಕೊಳ್ಳಲು ಪ್ರಯತ್ನಿಸುತ್ತದೆ. ಈಗ ಆನಂದಮಯ ಕೋಶ ವನ್ನು ಸ್ಪರ್ಶಿಸಿದಂತಾಗುತ್ತದೆ. ಈ ಆನಂದಾನುಭವವನ್ನೂ ಮೀರಿ ಹೋದಾಗ ಸಾಧಕನು ಆನಂದವೇ ಆಗಿಬಿಡುತ್ತಾನೆ, ಆತ್ಮವೇ ಆಗಿಬಿಡುತ್ತಾನೆ. ಎಲ್ಲೋ ಕೆಲವರು ಮಾತ್ರ ಈ ಸ್ಥಿತಿಯನ್ನು ಮುಟ್ಟುತ್ತಾರೆ.

ಯಾವುದನ್ನು ಪಡೆದರೆ ಎಲ್ಲವನ್ನೂ ಪಡೆದಂತಾಗುವುದೋ ಅದು ಸತ್. ಯಾವುದನ್ನು ತಿಳಿದರೆ ಎಲ್ಲವನ್ನೂ ತಿಳಿದಂತಾಗು ವುದೋ ಅದು ಚಿತ್. ಯಾವ ಸುಖವನ್ನು ಪಡೆದರೆ ಎಲ್ಲ ಸುಖ ವನ್ನು ಅನುಭವಿಸಿದಂತಾಗುವುದೋ ಅದು ಆನಂದ. ಆದ್ದರಿಂದ ಪರಬ್ರಹ್ಮನನ್ನು 'ಸಚ್ಚಿದಾನಂದ' ಎಂದು ಕರೆಯಲಾಗಿದೆ.

### ಪ್ರಾಪಂಚಿಕ ನಿದ್ರೆ

**ಶ್ರೀರಾಮಕೃಷ್ಣರು:** ''ಒಬ್ಬ ಚಾಪೆಯನ್ನು ಕಂಕುಳಲ್ಲಿ ಇಟ್ಟು ಕೊಂಡು ಬಯಲು ನಾಟಕ ನೋಡಲು ಹೋದ. ನಾಟಕ ಶುರುವಾಗಲು ಇನ್ನೂ ಸಮಯ ಬೇಕು ಎಂಬುದನ್ನು ಕೇಳಿ ಚಾಪೆ ಹಾಸಿ ಮಲಗಿಕೊಂಡ. ಎದ್ದಾಗ ನೋಡುತ್ತಾನೆ, ಎಲ್ಲ ಮುಗಿದುಬಿಟ್ಟಿದೆ. (ಎಲ್ಲರೂ ನಗುತ್ತಿದ್ದಾರೆ) ಬಳಿಕ ಅವನು ಚಾಪೆಯನ್ನು ಕಂಕುಳಿಗೆ ಹಾಕಿಕೊಂಡು ಮನೆಗೆ ಹಿಂದಿರುಗಿದ.'' *(ಅಲ್ಲೇ, ಪು.೧೬೪)*

ಶ್ರೀರಾಮಕೃಷ್ಣರು ಹೇಳುವಂತೆ ನಾವು ಮನುಷ್ಯರಾಗಿ ಹುಟ್ಟಿ ರುವುದೇ ಭಗವಂತನನ್ನು ಪಡೆಯುವುದಕ್ಕಾಗಿ. ಆದರೆ ನಾವು ಈ ಜಗತ್ತಿಗೆ ಬಂದು, ನಮ್ಮ ಆದರ್ಶವನ್ನು ಮರೆತು, ನಮ್ಮನ್ನೂ ಮರೆತು, ಅಸಂಖ್ಯ ಪ್ರಾಪಂಚಿಕ ವಿಷಯಗಳಲ್ಲಿ ತೊಡಗುತ್ತೇವೆ. ಇದೇ ನಮ್ಮ ಪಾಲಿಗೆ ನಿದ್ರೆ–ಆಧ್ಯಾತ್ಮಿಕ ಜಗತ್ತಿಗೆ ಎಚ್ಚರಗೊಳ್ಳದೇ ಇರುವುದು. ಹೀಗೆ ಇಡೀ ಜೀವನ ನಿದ್ರೆಯಲ್ಲಿಯೇ ಕಳೆದು ಹೋಗುತ್ತದೆ. ಅನೇಕರು ಜಗತ್ತನ್ನೂ ಅನುಭವಿಸುವುದಿಲ್ಲ, ಅಧ್ಯಾತ್ಮವನ್ನೂ ಅನುಭವಿಸುವುದಿಲ್ಲ.

ಕೆಲವು ಮಕ್ಕಳು ಯಾವಾಗಲೂ ನಿದ್ರಿಸುತ್ತಿದ್ದರಂತೆ, ನಿದ್ರಿಸು ವುದೇ ಅವರ ಕೆಲಸವಾಗಿತ್ತು. ಒಂದು ದಿನ ಹಣ್ಣು ಹಣ್ಣು ಮುದುಕಿಯೊಬ್ಬಳು ಬಂದು ನಿದ್ರಿಸುತ್ತಿದ್ದ ಮಕ್ಕಳನ್ನು ಎಬ್ಬಿಸಿ ಹೇಳಿದಳಂತೆ, ''ಮಕ್ಕಳೇ ಏಳಿ, ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ!'' ಹಾಗೆಯೇ ನಾವು ಎಚ್ಚರಗೊಂಡು ಭಗವಂತನಲ್ಲಿ ವಿಶ್ರಾಂತಿ ಯನ್ನು ಪಡೆಯಲು ಬಯಸಬೇಕು.

ಅನೇಕರು ಅದೆಷ್ಟು ಪ್ರಾಪಂಚಿಕ ವಿಷಯಗಳಲ್ಲಿ ಮಗ್ನ ರಾಗಿರುತ್ತಾರೆಂದರೆ, ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸುವು ದಕ್ಕೂ ಅವರಿಗೆ ಪುರುಸೊತ್ತಿರುವುದಿಲ್ಲ. ಎಲ್ಲವನ್ನೂ ಶೂನ್ಯ ದೃಷ್ಟಿಯಿಂದ ನೋಡುತ್ತಾ ಓಡಾಡುತ್ತಾರೆ. ಗಿಡ, ಮರ, ಬೆಟ್ಟ ಮುಂತಾದ ನೈಸರ್ಗಿಕ ದೃಶ್ಯಗಳನ್ನು ನೋಡಿ ಆನಂದಿಸುವುದು ಮಾನಸಿಕ ಮಾತ್ರವಲ್ಲದೆ ದೈಹಿಕ ಆರೋಗ್ಯಕ್ಕೂ ಒಳ್ಳೆಯದು. ಒಂದು ವರದಿಯ ಪ್ರಕಾರ: ನೈಸರ್ಗಿಕ ವಾತಾವರಣದಲ್ಲಿ ೯೦ ನಿಮಿಷ ಓಡಾಡುವುದರಿಂದ ಚಿಂತೆ ಕಡಿಮೆಯಾಗುತ್ತದೆ, ರಕ್ತ ದೊತ್ತಡ ಇಳಿಯುತ್ತದೆ. ADHD (Attention deficit hyperactivity disorders) ರೋಗಲಕ್ಷಣಗಳು ಹ್ರಸ್ವಗೊಳ್ಳು ತ್ತವೆ, ಒತ್ತಡ ಆತಂಕಗಳು ತಗ್ಗುತ್ತವೆ. ಆದರೆ ಅದೇ ೯೦ ನಿಮಿಷ ನಗರ ವಾತಾವರಣದಲ್ಲಿ ನಡೆದಾಡಿದರೆ ಈ ಯಾವ ಪರಿಣಾಮ ಗಳೂ ಉಂಟಾಗುವುದಿಲ್ಲವಂತೆ. (ಬಹುಶಃ ಜಾಸ್ತಿಯೇ ಆಗ ಬಹುದು)

### ಜ್ಞಾನಿಯ ಲಕ್ಷಣವೇ ಸಾಧಕನ ಸಾಧನೆ

**ಶ್ರೀರಾಮಕೃಷ್ಣರು:** ''ಸಾಧನೆಯ ಅವಸ್ಥೆಯಲ್ಲಿ ಅವು (ಶಾಸ್ತ್ರ ಗಳು) ಏನು ಹೇಳುತ್ತವೆ ಎಂಬುದನ್ನು ತಿಳಿದುಕೊಳ್ಳಬೇಕಾ

ಗುತ್ತದೆ. ಭಗವಂತನ ಸಾಕ್ಷಾತ್ಕಾರ ದೊರೆತ ನಂತರ ಜ್ಞಾನದ ಅಭಾವವಿರದು. ಬಳಿಕ ಭಗವತಿ ಜ್ಞಾನರಾಶಿಯನ್ನು ನೂಕಿ ಕೊಡುತ್ತಲೇ ಇರುತ್ತಾಳೆ.''

''ಮಗು ಬರೆಯಲು ಪ್ರಾರಂಭಿಸಿದಾಗ ಮೊದಮೊದಲು ಅಕ್ಷರವಾದ ಮೇಲೆ ಅಕ್ಷರವನ್ನು ನೋಡಿ ನೋಡಿ ಬರೆಯ ಬೇಕಾಗುತ್ತದೆ. ಆದರೆ ಕ್ರಮೇಣ ಅದು ನೀರು ಕುಡಿದ ಹಾಗೆ ಬರೆದುಕೊಂಡು ಹೋಗಿಬಿಡುತ್ತದೆ.''

''ಚಿನ್ನ ಕರಗಿಸುವಾಗ ಬಹಳ ಚಟುವಟಿಕೆಯಿಂದ ಕೆಲಸ ಮಾಡಬೇಕು. ಒಂದು ಕೈಯಲ್ಲಿ ತಿದಿ, ಇನ್ನೊಂದು ಕೈಯಲ್ಲಿ ಬೀಸಣಿಗೆ, ಬಾಯಲ್ಲಿ ಊದುಕೊಳವೆ-ಚಿನ್ನ ಕರಗದವರೆಗೆ. ಕರ ಗಿದ ನಂತರ ಅಚ್ಚಿಗೆ ಸುರಿದ ಒಡನೆಯೇ ನಿಶ್ಚಿಂತೆ.'' *(ಅಲ್ಲೇ, ಪು.೧೬೪-೬೫)*

ಇದರಂತೆಯೇ ಸಾಧನೆಯ ಸಮಯದಲ್ಲಿ ನೈತಿಕ ಗುಣ ಗಳನ್ನು ಪ್ರಯತ್ನಪೂರ್ವಕವಾಗಿ ಅನುಸರಿಸಬೇಕಾಗುತ್ತದೆ. ಆದರೆ ಸತ್ಯ ಸಾಕ್ಷಾತ್ಕಾರವಾದ ಮೇಲೆ ಅವೆಲ್ಲ ಸ್ವಾಭಾವಿಕವಾಗಿ ಬಿಡುತ್ತವೆ - ಉಸಿರಾಟದಂತೆ.

**ಉತ್ಪನ್ನಾತ್ಮಪ್ರಬೋಧಸ್ಯ ಹ್ಯದ್ವೇಷ್ಟೃತ್ವಾದಯೋ ಗುಣಾಃ ।**
**ಅಯತ್ನತೋ ಭವಂತ್ಯಸ್ಯ ನ ತು ಸಾಧನರೂಪಿಣಃ ॥**

*('ನೈಷ್ಕರ್ಮ್ಯಸಿದ್ಧಿ'. ೪.೬೯.)*

''ಆತ್ಮಜ್ಞಾನವುಂಟಾದವನಿಗೆ ಅದ್ವೇಷ್ಟಾ ಮುಂತಾದ ಗುಣ ಗಳು ಪ್ರಯತ್ನವಿಲ್ಲದೆಯೇ ಉಂಟಾಗುತ್ತವೆ. ಅವು ಅವನಿಗೆ ಸಾಧನೆಗಳಲ್ಲ.''

ಶ್ರೀಶಂಕರಾಚಾರ್ಯರು ಭಗವದ್ಗೀತೆಯಲ್ಲಿ ಬರುವ ಸ್ಥಿತ ಪ್ರಜ್ಞನ ಲಕ್ಷಣಗಳನ್ನು ಕುರಿತು ವ್ಯಾಖ್ಯಾನಿಸುವಾಗ ಹೀಗೆ ಹೇಳು ತ್ತಾರೆ: '**ಸರ್ವತ್ರ ಏವ ಹಿ ಅಧ್ಯಾತ್ಮಶಾಸ್ತ್ರೇ ಕೃತಾರ್ಥ ಲಕ್ಷಣಾನಿ ಯಾನಿ ತಾನಿ ಏವ ಸಾಧನಾನಿ ಉಪದಿಶ್ಯಂತೇ ಯತ್ನಸಾಧ್ಯತ್ವಾತ್ ।**' - 'ಎಲ್ಲ ಅಧ್ಯಾತ್ಮ ಶಾಸ್ತ್ರಗಳಲ್ಲಿಯೂ ಕೃತಾರ್ಥನ ಲಕ್ಷಣಗಳನ್ನೇ (ಇತರರಿಗೆ) ಸಾಧನಗಳೆಂದು ಉಪದೇಶಿಸಲಾಗಿದೆ. ಏಕೆಂದರೆ ಪ್ರಯತ್ನಪಟ್ಟರೆ ಆ ಲಕ್ಷಣಗಳನ್ನು (ಇತರರೂ ಕೂಡ) ಪಡೆಯ ಬಹುದು.'

ಶ್ರೀರಾಮಕೃಷ್ಣರೂ ಮುಂದೆ ಇದನ್ನೇ ಹೇಳುತ್ತಾರೆ: ''ಯಾರಿಗೆ ಆತ್ಮಜಾಗೃತಿ ಉಂಟಾಗಿದೆಯೋ ಅವರ ಕಾಲು ತಪ್ಪು ಹೆಜ್ಜೆಯನ್ನು ಇಡುವುದಿಲ್ಲ. ಅವರು ವಿಚಾರ ಮಾಡಿ ಪಾಪ ಕಾರ್ಯಗಳನ್ನು ತ್ಯಾಗಮಾಡಬೇಕಾಗಿರುವುದಿಲ್ಲ. ಅವರಿಗೆ ಭಗ ವಂತನ ಮೇಲೆ ಅಷ್ಟೊಂದು ಪ್ರೀತಿ. ಅವರು ಯಾವ ಕರ್ಮ ಮಾಡಿದರೂ ಅದು ಸತ್ಕರ್ಮವೇ ಆಗಿರುತ್ತದೆ. ಅವರಿಗೆ ಚೆನ್ನಾಗಿ ಗೊತ್ತಿದೆ, ಕರ್ಮಗಳ ಕರ್ತೃ ನಾವಲ್ಲ, ನಾವು ಕೇವಲ ಭಗವಂತನ ದಾಸರು ಎಂಬುದಾಗಿ. ಅವರು ಸತತ ಭಾವಿಸುತ್ತಾರೆ: 'ನಾನು ಯಂತ್ರ, ಆತ ಯಂತ್ರಿ (ಯಂತ್ರ ನಡೆಸುವವನು). ಆತ ಮಾಡಿ ಸಿದ ಹಾಗೆ ಮಾಡುತ್ತೇನೆ, ನುಡಿಸಿದ ಹಾಗೆ ನುಡಿಯುತ್ತೇನೆ, ಚಲಿಸಿದ ಹಾಗೆ ಚಲಿಸುತ್ತೇನೆ.'' *(ಅಲ್ಲೇ, ಪು.೧೬೬)*

**(ಮುಂದುವರಿಯುವುದು)**

## ನಿಜವಾದ ರಹಸ್ಯ

ಒಂದೆಡೆ ಹಲವಾರು ಮಿಡಿತೆಗಳು ಒಂದು ದೀಪದ ಸುತ್ತ ಕುಳಿತಿದ್ದವು. ಅವು ಯೋಚಿಸಿದವು: ''ಈ ದೀಪದ ಜ್ವಾಲೆ ಅಷ್ಟೊಂದು ಆಕರ್ಷಕವಾಗಿದೆ. ಅದೇಕೆ ನಮ್ಮನ್ನು ಹತ್ತಿರಕ್ಕೆ ಸೆಳೆಯುತ್ತವೆ? ಏನಿದೆ ಅಂಥದು ಅದರಲ್ಲಿ? ಏನೋ ರಹಸ್ಯ ಇರಲೇಬೇಕು.'' ಇದನ್ನು ಕಂಡುಹಿಡಿಯಬೇಕೆಂದು ಮಿಡಿತೆಗಳೆಲ್ಲಾ ಒಂದೊಂದಾಗಿ ದೀಪದ ಕುಡಿಯ ಬಳಿಗೆ ಹೋಗಿ ಅನ್ವೇ ಷಣೆ ಮಾಡಿದವು.

ಆದರೆ ದೀಪದ ಜ್ವಾಲೆಯ ಬಳಿಗೆ ಹೋಗುವಷ್ಟರಲ್ಲಿ ಅವುಗಳಿಗೆ ಬೆಂಕಿಯ ಶಾಖ ತಡೆಯಲಾಗದೆ, ಇನ್ನೇನು ಉರಿದೇ ಹೋಗುತ್ತವೆ ಎನ್ನುವಷ್ಟರಲ್ಲಿ ಅಲ್ಲಿಂದ ಹಿಂದರುಗಿ ಬಂದುವು. ಕೊನೆಗೆ ಮಿಡಿತೆಗಳ ನಾಯಕ ಬಂದು ಹೇಳಿತು, ''ಈ ರೀತಿ ನೀವು ಅದರ ರಹಸ್ಯವನ್ನು ತಿಳಿಯಲಾರಿರಿ. ನೀವು ಆ ದೀಪದ ಜ್ವಾಲೆಯಲ್ಲಿ ಒಂದಾಗಬೇಕು. ಆಗ ಮಾತ್ರವೇ ನಿಮಗೆ ಸತ್ಯ ವೇನೆಂಬುದು ತಿಳಿಯುವುದು. ಹಿಂದಿರುಗಿ ಬಂದಿರೋ, ನಿಮಗೆ ಏನೂ ಗೊತ್ತಾಗದು. ''

ಕೊನೆಗೆ ಆ ನಾಯಕ ಮಿಡಿತೆಯೇ ರಹಸ್ಯವನ್ನು ತಿಳಿಯಲು ದೀಪದ ಬಳಿಗೆ ಹೋಯಿತು. ಸ್ವಲ್ಪವೂ ಅಳುಕದೆ, ಅದು ಅಗ್ನಿಜ್ವಾಲೆಯನ್ನು ಪ್ರವೇಶಿಸಿತು. ಅದು ಬೆಂಕಿಯಲ್ಲಿ ಒಂದಾಗಿ ಹೋಯಿತು. ಬೆಂಕಿಯಲ್ಲಿ ಉರಿದುಹೋದ ನಾಯಕ ಮಿಡಿತೆ ಯನ್ನು ಕಂಡು ಉಳಿದ ಮಿಡಿತೆಗಳು ಹೇಳಿದುವು: ''ಬೆಂಕಿಯಲ್ಲಿ ಒಂದಾದವನಿಗೆ ಮಾತ್ರ ಅದರ ರಹಸ್ಯ ತಿಳಿಯುವುದು.''

ತಿಳಿಯುವ ವ್ಯಕ್ತಿಯು ತಿಳಿಯುವ ವಸ್ತುವಿನಲ್ಲಿ ಒಂದಾದಾಗಲೇ ನಿಜವಾದ ಜ್ಞಾನವುಂಟಾಗುವುದು. ಅಂತೆಯೇ ಪ್ರೀತಿ ಸುವ ವ್ಯಕ್ತಿ ಯಾರನ್ನು ಪ್ರೀತಿಸುವನೋ ಅವನಲ್ಲಿ ಒಂದಾಗಬೇಕು. ಅದೇ ನಿಜವಾದ ಪ್ರೀತಿ. ಭಗವಂತನ ವಿಷಯದಲ್ಲೂ ಇದು ಹಾಗೆಯೇ.

*(ಒಂದು ಸೂಫೀ ಕಥೆಯಿಂದ)*